ದಿನಾಂಕ 06-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಪಾಟೀಸವಾಲುಃ ವಾದಿಯ ಪರ ಶ್ರೀ ಡಿ.ಎಸ್. ವಕೀಲರಿಂದ**

13) ನನಗೆ ಈಗ ತೋರಿಸಿದ ನಿಶಾನೆ ಡಿ-27 ರ ದಾಖಲೆಗಳನ್ನು ಮನೆಯ ಮುಖ್ಯಬಾಗಿಲನ್ನು ಹಾಕುವ ಮೊದಲು ಪಡೆದದ್ದಾ ಎಂದರೆ, ಅದನ್ನು ಎಲ್ಲಾ ಬಾಗಿಲುಗಳ ಕೆಲಸ ಆದ ನಂತರ ಬಿಲ್ಲಿನೊಂದಿಗೆ ಕೊಟ್ಟಿದ್ದು. ಆಗ ವಾದಿ ಕೆಲಸ ಬಿಟ್ಟು ಆಗಿತ್ತಾ ಎಂದರೆ, ವಾದಿ ಕೆಲಸ ಮಾಡುವುದಿಲ್ಲ ಎಂದಿದ್ದರು. ತಾರೀಕು 31-03-2021 ರಂದು ಮನೆಯ ಮುಖ್ಯ ಬಾಗಿಲನ್ನು ಕುಳ್ಳಿರಿಸಿದ್ದು ಎಂದರೆ ನಿಜ. ನನಗೆ ಈಗ ತೋರಿಸಿದ ಪೋಟೋಗಳು ನನ್ನ ಮನೆಯ ಕಟ್ಟಡದ ಪೋಟೋಗಳು ಎಂದರೆ ನಿಜ. ವಾದಿ ಕೆಲಸ ನಿಲ್ಲಿಸಿದಾಗ ಕಾಮಗಾರಿ ಈ ಸ್ಥಿತಿಯಲ್ಲಿ ಇತ್ತು ಎಂದರೆ ನಿಜ, ಸದರಿ ಪೋಟೋ ಇರುವ ದಾಖಲೆಯನ್ನು **ನಿಶಾನೆ ಪಿ-7** ಎಂದು ತಕರಾರಿಗೆ ಒಳಪಟ್ಟು ಗುರುತಿಸಿದೆ.

14) ನಿಶಾನೆ ಪಿ-7 ರ ಮೊದಲನೇ ಚಿತ್ರದಲ್ಲಿ ಕಾಣುವಂತಹ ರಸ್ತೆಯನ್ನು ವಾದಿ ನನ್ನ ಮನೆಗೆ ಮಾಡಿಸಿಕೊಟ್ಟಿದ್ದಾರೆ ಎಂದರೆ, ಅದಕ್ಕಾಗಿ ನಾನು ಹಣ ಖರ್ಚು ಮಾಡಿದ್ದೇನೆ. ನಿಶಾನೆ ಪಿ-7 ರ, 1 ಮತ್ತು 4 ಪೋಟೋಗಳಲ್ಲಿ ಕಂಡು ಬರುವ ಮರಳು ಇರುವ ಜಾಗೆ ನನಗೆ ಸೇರಿದ ಜಾಗೆ ಎಂದರೆ ನಿಜ. ನಿಶಾನೆ ಪಿ-4 ರ ನಕಾಶೆ ನನ್ನ ಮನೆಯ ನಕಾಶೆ. ವಾದಿಗೆ ನನ್ನ ಮನೆಯ ಕಾಮಗಾರಿಗಾಗಿ ನಾನು 32,50,000.00 ಲಕ್ಷ ರೂಪಾಯಿಗಳ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಕೇವಲ 25,21,000.00 ರೂಪಾಯಿಗಳನ್ನು ಪಾವತಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ''ಬಿ'' ಶೆಡ್ಯೂಲ್ ನ ಪಾವತಿಯನ್ನು ನನ್ನ ಬ್ಯಾಂಕ್‌ನ ಖಾತೆಯೊಂದಿಗೆ ತಾಳೆ ಮಾಡಿಕೊಳ್ಳಬಹುದು.

15) ವಾದಿಗೆ ನಾನು 32,50,000/- ಲಕ್ಷ ರೂಪಾಯಿಗಳ ಹಣ ಪಾವತಿಸಿದ್ದೇನೆ ಎನ್ನುವುದು ಯಾವ ಆಧಾರದಿಂದ ಎಂದರೆ, ನಾನು ಆತನಿಗೆ ಆ

ಹಣವನ್ನು ನನ್ನ ನಂಬಿಕೆಯಿಂದ ಕೊಟ್ಟಿದ್ದೇನೆ. ನಾನು ವಾದಿಗೆ 7,50,000/- ಲಕ್ಷ ರೂಪಾಯಿಗಳ ಹೆಚ್ಚಿಗೆ ಕೊಟ್ಟಿದ್ದೇನೆ ಎಂದು ಯಾವ ಆಧಾರದಿಂದ ಎಂದರೆ, ನಾನು ಆ ಹಣವನ್ನು ಕೊಟ್ಟಿದ್ದೇನೆ. ಈ ಕಟ್ಟಡದ ಕೆಲಸ ಪೂರ್ಣಗೊಳಿಸಲು ಎಷ್ಟು ಖರ್ಚು ಮಾಡಿದೆ ಎಂದರೆ, ಅದಕ್ಕಾಗಿ ನಾನು ಲೆಕ್ಕ ಬರೆದಿಟ್ಟಿಲ್ಲ, ಆದರೆ 50 ಲಕ್ಷಕ್ಕೂ ಮಿಗಿಲಾಗಿ ಖರ್ಚು ಆಗಿದೆ. ವಾದಿ ಕೆಲಸ ಬಿಡುವಾಗ ಎಷ್ಟು ಮೌಲ್ಯದ ಕೆಲಸವಾಗಿತ್ತು ಎಂದರೆ, ಆಗ ಸುಮಾರು 70 ಪರ್ಸಂಟ್‌ನಷ್ಟು ಕೆಲಸವಾಗಿದೆ ಎಂದು ವಾದಿ ಹೇಳಿದ್ದರು. ವಾದಿ ಕೆಲಸ ಬಿಟ್ಟಾಗ ನಾನು ಆ ಕೆಲಸವನ್ನು ಬೇರೆ ಇಂಜಿನಿಯರ್ ರವರಿಂದ ಕರೆಯಿಸಿ ತೋರಿಸಿದ್ದೆ. ಆ ವರದಿ ನಿಶಾನೆ ಡಿ-2 ಎಂದರೆ ನಿಜ. ನಿಶಾನೆ ಡಿ-2 ರ ದಾಖಲೆಯನ್ನು ಬರೆದುಕೊಟ್ಟ ವ್ಯಕ್ತಿ ನನಗೆ ಸ್ನೇಹಿತನಿಂದ ಗೊತ್ತು. ನಿಶಾನೆ ಡಿ-2 ರ ದಾಖಲೆ ಕೊಡುವ ಮೊದಲು ಅವರು ಬಂದು, ಕಟ್ಟಡವನ್ನು ನೋಡಿ ಅಳತೆ ಮಾಡಿದ್ದರು. ನಿಶಾನೆ ಡಿ-2 ರ ವರದಿಗಾಗಿ ಮಾಡಿದ ಲೆಕ್ಕಚಾರದ ವಿವರ ಯಾರ ಬಳಿಯಲ್ಲಿ ಇದೆ ಎಂದರೆ, ನನಗೆ ನೆನಪಿಲ್ಲ.

16) ನಿಶಾನೆ ಪಿ-7 ರ ಕಾಮಗಾರಿಯನ್ನು ವಾದಿ ಬಿಟ್ಟ ನಂತರ ಮುಗಿಸಲು ಸುಮಾರು ಹೆಚ್ಚು -ಕಡಿಮೆ 17 ರಿಂದ 18 ಲಕ್ಷದಷ್ಟು ಹಣ ಖರ್ಚು ಆಗಿದೆ. ನಾನು ವಾದಿಗೆ ಹೆಚ್ಚಿ ನ 7,50,000/-ಲಕ್ಷದಷ್ಟು ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-1 ರಲ್ಲಿ ಹೇಳಿದ ನಿಪಿ-6 ರ ವಿವರಗಳನ್ನು ವಾದಿ ಬರೆದದ್ದು ಅಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-2 ರ ದಾಖಲೆಯನ್ನು ನಾನು, ಗಣೇಶ ಶೆಟ್ಟಿ ಇವರೊಂದಿಗೆ ಸೇರಿ ಈ ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ತಾನು ಸಿವಿಲ್ ಇಂಜಿನಿಯರ್ ಎಂದು ಯಾವಾತ್ತೂ ಹೇಳಿಲ್ಲ ಎಂದರೆ ಸರಿಯಲ್ಲ.

17) ತಾರೀಕು 18-02-2021 ರಂದು ವಾದಿಯೊಂದಿಗೆ ಯಾವುದೇ ಲೆಕ್ಕಚಾರ ಆದ ಬಗ್ಗೆ ನೆನಪಿಲ್ಲ. ಆ ದಿನಾಂಕದಂದು ಹಣ ಪಾವತಿ ಮಾಡಿದ್ದ ಬಗ್ಗೆ ನಾನು ಬರೆದು ಇಟ್ಟಿಲ್ಲ. ತಾರೀಕು 18-02-2021 ರ ಬ್ಯಾಂಕಿನ ವ್ಯವಹಾರ ನೋಡಿದರೆ ಹೇಳಬಹುದಾ ಎಂದರೆ, ವಾದಿಗೆ ಹಣವನ್ನು ಬ್ಯಾಂಕಿನಿಂದ ಮಾತ್ರವೇ ತೆಗೆದುಕೊಟ್ಟಿದ್ದು ಅಲ್ಲ, ನಗದಾಗಿಯೂ ಪಾವತಿಸಿದ್ದೇನೆ. ವಾದಿಗೆ ಹಣ ಪಾವತಿಸಿದ ಪ್ರತಿ ಸಮಯದಲ್ಲಿ

ನಾನು ರಶೀತಿ ಪಡೆದಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 5 ಮತ್ತು 6 ರಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಓದಿ ಹೇಳಿದ್ದಾರಾ ಎಂದರೆ, ನೆನಪಿಲ್ಲ. ನನಗೆ ಓದಲು ಬರುವುದಿಲ್ಲ.

18) ವಾದಿಯೊಂದಿಗೆ ಅಂತಿಮ ಲೆಕ್ಕಪತ್ರ ಮಾಡಿದ್ದು ನೆನಪಿಲ್ಲ. ನನ್ನ ಮತ್ತು ವಾದಿಯ ನಡುವೆ ಅಂತಿಮವಾಗಿ ಲೆಕ್ಕಪತ್ರವಾಗಿದೆ ಮತ್ತು ಆ ಲೆಕ್ಕಚಾರವನ್ನು ವಾದಿ ಒಪ್ಪಿದ್ದಾನೆ ಎಂದರೆ, ಅದಕ್ಕಾಗಿ ವಾದಿ ಬಂದಿಲ್ಲ, ಇನ್ನು ಮುಂದೆ ಬರುವುದಿಲ್ಲ, ನಿನ್ನ ಕೆಲಸ ನಿನಗೆ ಎಂದು ಹೇಳಿ ಹೋಗಿದ್ದಾನೆ. ವಾದಿ ಕೆಲಸ ಬಿಟ್ಟ ನಂತರ ಆ ಕೆಲಸ ಪೂರ್ಣವಾಗಿಸಲು ಯಾವುದೇ ಗುತ್ತಿಗೆದಾರರನ್ನು ನಾನು ಹಿಡಿದಿಲ್ಲ. ನಿಶಾನೆ ಸಿ-1 ರ ವರದಿ ಸರಿಯಲ್ಲ ಎಂದು ನಾನು ಹೇಳುವುದು ಅದರಲ್ಲಿ ನಾವು ಮಾಡಿದ ಕೆಲಸವನ್ನು ಸೇರಿಸಿಲ್ಲ ಎಂಬ ಕಾರಣಕ್ಕಾಗಿ ಎಂದರೆ ನಿಜ. ಅದು ವಾದಿ ಬಿಟ್ಟ ನಂತರ ಆದ ಕೆಲಸ ಎಂದರೆ ನಿಜ. ನಾನು ವಾದಿ ದಾವೆಯಲ್ಲಿ ಕೇಳಿದ ಹಣವನ್ನು ಪಾವತಿಸಲು ಬದ್ಧನಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್ ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ